ದೃಷ್ಟಿಗಿಂತ ಹರಿತವಾದದ್ದು ಮತ್ತೊಂದು ಇರಲಾರದು.

ಯಳಂದರಾಯರದು ಹದ್ದಿನ ದೃಷ್ಟಿ. ಕಣ್ಣಲ್ಲೇ ಯಾವ ಆಳವನ್ನೂ ಅಳೆಯಬಲ್ಲರು. ಒಂದು ಮಹಾ ಅರ್ಪಣೆಗಂತಲೇ ಅಲ್ಲಿಂದ ಎಷ್ಟೋ ಬಾರಿ ಬಂದಿದ್ದರು. ಆ ಭಾಗದ ಜನರಿಗೆ ತಾರಾಳ ಸಾನ್ನಿಧ್ಯ ಭಾಗ್ಯ ದೊರೆತಿದ್ದು ರಾಯರಿಗೆ ಮಾತ್ರ. ಬಯಕೆ ಹೊತ್ತು ಹೋಗುತ್ತಿದ್ದ ಇತರರಿಗೆ ಅವಳು ಮಮಕಾರದ ಅಕ್ಕ ಮಾತ್ರ. ಹಾವೇರಿ ಭಾಗದಿಂದ ಬರುವ ಯಾರೇ ಜನರಿಗೂ ಅವಳು ಸೆರಗೊಡ್ಡ ಹೋಗಲಿಲ್ಲ. ಹಾಗೆ ಬಂದವರನ್ನು ಕೂತು ಮಾತನಾಡಿಸಿ, ಊಟ ಬಡಿಸಿ, ಖರ್ಚಿಗೆ ಇಷ್ಟು ದುಡ್ಡು ಬಟ್ಟೆ ಬರೆ ಕೊಟ್ಟು, 'ಇಂತಲ್ಲಿ ನೀವು ಬರಬಾರದು' ಎಂದು ಹೇಳಿ ಕಳಿಸುತ್ತಿದ್ದಳು. ತನ್ನ ನಾಡು ಅವಳನ್ನು ಹಾದರದವಳು ಎಂದು ಹಣೆಪಟ್ಟಿ ಹಚ್ಚಿದರೂ ಅವಳು ಮಾತ್ರ ಸಹೋದರಿಯಾಗಿಯೇ ಉಳಿಯಬಯಸಿದಳು. ಮುಳಾ, ಮೂಠಾ, ಯಾರ ಯಾರ ಪಾಪವನ್ನು ಎಲ್ಲೆಲ್ಲಿಗೆ ಕೊಂಡೊಯ್ಯುತ್ತದೋ.

***

